# *Press Clipping*

**The Resource Centre**

| | | |
|---|---|---|
| **Publication** | : | **Ee Sanje** |
| **Date** | : | **June 9, 2016** |
| **Edition** | : | **State** |
| **Page** | : | **6** |



## ನಿರುತ್ತರದ ಗಾನಸುಧೆ

ಕನ್ನಡ ಚಿತ್ರರಂಗದಲ್ಲಿ ಮಹಿಳಾ ಕಲಾವಿದರೊಬ್ಬರು ಸಿನಿಮಾ ನಿರ್ಮಾಣಕ್ಕೆ ಮುಂದಾಗಿರುವುದು ತುಂಬಾ ಅಪರೂಪ. ಅವರ ಈ ಕೆಲಸಕ್ಕೆ ಯಶಸ್ಸು ಸಿಗಲಿ ಎಂದು ಚಿತ್ರದ ನಿರ್ಮಾಪಕಿ ಹಾಗೂ ನಟಿ ಭಾವನಾ ಅವರಿಗೆ ರೆಬೆಲ್‌ಸ್ಟಾರ್ ಅಂಬರೀಶ್ ಅವರು ಶುಭ ಹಾರೈಸಿದರು.

ಅಪೂರ್ವ ಕಾಸರವಳ್ಳಿ ಅವರ ಚೊಚ್ಚಲ ನಿರ್ದೇಶನದ ನಿರುತ್ತರ ಕನ್ನಡ ಚಲನಚಿತ್ರದ ಆಡಿಯೋ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಭಾವನಾ ಮತ್ತು ಅವರ ಸಹೋದರ ಅರವಿಂದ ರಾಮಣ್ಣ ಅವರ ಹೋಮ್‌ಟೌನ್ ಪ್ರೊಡಕ್ಷನ್ಸ್ ನಿರುತ್ತರ ಚಿತ್ರ ನಿರ್ಮಾಣವಾಗಿದೆ. ಶಾಸ್ತ್ರೀಯ ಸಂಗೀತದಲ್ಲಿ ಕ್ಸಿಟಾರ್ ಹೆಸರಿನ ವಿಭಿನ್ನ ಸಿತಾರ್‌ನಲ್ಲಿ ಹೆಸರು ಮಾಡಿರುವ ನೀಲಾದ್ರಿಕುಮಾರ್ ಮೊದಲ ಬಾರಿಗೆ ಕನ್ನಡ ಚಿತ್ರವೊಂದಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಈ ಹಾಡುಗಳು ಕನ್ನಡ ಚಿತ್ರರಂಗದಲ್ಲಿ ಬಹಳ ಸಮಯ ಉಳಿಯಲಿವೆ ಎಂದು ಆಡಿಯೋ ಬಿಡುಗಡೆ ಮಾಡಿದ ಲಹರಿ ಸಂಸ್ಥೆಯ ವೇಲು ಅವರು ನುಡಿದರು.

ಸಂಗೀತ ನಿರ್ದೇಶಕ ನೀಲಾದ್ರಿ, ಕುಮಾರ್ ಮಾತನಾಡಿ ಗೀತರಚನೆಕಾರ ಕವಿರಾಜ್ ಅವರ ಸಾಹಿತ್ಯವನ್ನು ಮೆಚ್ಚಿಕೊಂಡರು. ಎಂಟು ಹಾಡುಗಳಿರುವ ಈ ಚಿತ್ರದ ಧ್ವನಿಸುರಳಿಯನ್ನು ನಟ, ಸಚಿವ ಅಂಬರೀಶ್ ಅವರು ಬಿಡುಗಡೆ ಮಾಡಿದರು. ಈ ಚಿತ್ರದ ಎಲ್ಲ ಹಾಡುಗಳನ್ನೂ ಹೊಸಬರು ಹಾಡಿದ್ದಾರೆ. ಚಿತ್ರದ ಕಲಾವಿದರಾದ ಕಿರಣ್ ಶ್ರೀನಿವಾಸ್, ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿ, ನಟ ದರ್ಶನ್, ಆದಿತ್ಯ, ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು, ಸಿಂಗ್ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ನಾಲ್ಕು ಪಾತ್ರಗಳ ನಡುವೆ ನಡೆಯುವ ಘಟನೆಗಳು, ಕಥನಗಳು, ಸಂಕೀರ್ಣ ಸಂಬಂಧದ ಎಳೆಗಳು ಮತ್ತು ನಾಟಕೀಯ ತಿರುವುಗಳು ನಿರುತ್ತರ ಚಿತ್ರದ ಪ್ರಮುಖ ಅಂಶಗಳಾಗಿವೆ. ಭಾವನಾ, ಐಂದ್ರಿತಾ ರೈ, ರಾಹುಲ್ ಬೋಸ್ ಹಾಗೂ ಕಿರಣ್ ಮುಂತಾದವರು ಅಭಿನಯಿಸಿದ್ದಾರೆ. ಶೀಘ್ರದಲ್ಲೇ ತೆರೆಗೆ ಬರಲಿರುವ ಈ ಚಿತ್ರಕ್ಕೆ ವಿಕ್ರಮ್ ಹತ್ವಾರ್ ಕಥೆ ಬರೆದಿದ್ದಾರೆ.

ಹಿರಿಯ ಯೋಗಿ, ಕನ್ನಡ ವಿಜಯಲಕ್ಷ್ಮಿ

ಸಿನಿಮಾ ತಡವಾಗಿ ಬರುತ್ತಿರುವುದು ಬೇಸರವಾಗಿದೆ. ಇದು ಯಾವ ಕಾಲಕ್ಕೂ ಹೊಂದಿಕೊಳ್ಳುವಂಥ ಸಬ್ಜೆಕ್ಟ್, ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ವಿಜಯ್ ಪ್ರಕಾಶ್, ಪ್ರಿಯಾ ಹಿಮೇಶ್ ಹಾಗೂ ನಾನು ಕೂಡ ಎರಡು ಹಾಡನ್ನು ಹಾಡಿದ್ದೇನೆ. ಒಳ್ಳೆ ಕಥೆಯನ್ನು ನಿರ್ದೇಶಕ ಘನಶ್ಯಾಮ್ ಅದ್ಭುತವಾಗಿ ಪ್ರಸೆಂಟ್ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಚಿತ್ರಕ್ಕೆ ಸಂಭಾಷಣೆಗಳನ್ನು ಬರೆದ ವಿಶ್ವತ್ ನಾಯಕ್ ಮಾತನಾಡಿ, ನಾನು ಧಾರಾವಾಹಿಗಳಿಗೆ ಬರೆದುಕೊಂಡಿದ್ದ ಕಾಲದಲ್ಲಿ ಸ್ನೇಹಿತ ಘನಶ್ಯಾಮ್ ನನಗೆ ಈ ಅವಕಾಶ ಕೊಟ್ಟರು. ಈ ಚಿತ್ರದಿಂದ ನಾನು ಇಂಡಸ್ಟ್ರಿ ಪ್ರವೇಶಿಸಿ ನಿರ್ದೇಶಕನೂ ಆದೆ ಎಂದು ಹೇಳಿದರು. ಈ ಚಿತ್ರದ ಉಳಿದ ಪಾತ್ರವರ್ಗಗಳಲ್ಲಿ ಶ್ರೀನಿವಾಸಪ್ರಭು, ಜೋಸೈಮನ್ ಅಮಿತ್ ಸೇರಿದಂತೆ ಹಲವಾರು ಹಿರಿಯ ಹಾಗೂ ಕಿರಿಯ ಕಲಾವಿದರು ಅಭಿನಯಿಸಿದ್ದಾರೆ.